**ದಿನಾಂಕಃ 10-08-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು1 ಮತ್ತು 2 ನೇ ಪ್ರತಿವಾದಿಯ ಪರ ಶ್ರೀ ಎಸ್ ಆರ್ ಹೆಚ್ ವಕೀಲರಿಂದಃ**

1) 2 ನೇ ವಾದಿ ನನ್ನ ತಾಯಿ, 1 ನೇ ವಾದಿ ನನ್ನ ದೊಡ್ಡಮ್ಮ. ಈ ದಾವೆ ಸಲ್ಲಿಸಲು ಮಾಹಿತಿಯನ್ನು ವಾದಿಯರು ಕೊಟ್ಟಿರುತ್ತಾರೆ. ನನಗೆ ಮುಕ್ತಿಯಾರ ನಾಮೆಯನ್ನು ಕೊಟ್ಟ ನಂತರ ಈ ದಾವೆಯ ವಿಚಾರವನ್ನು ವಕೀಲರು ಮತ್ತು ನನ್ನ ತಾಯಿ ತಿಳಿಸಿರುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಎಲ್ಲಾ ಉತಾರಗಳನ್ನು ಹಾಜರು ಪಡೆಸಿರುವುದಿಲ್ಲ ಎಂದರೆ ಸರಿ ಅಲ್ಲ. ನಿಪಿ-2 ಆಸ್ತಿಯನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಕಣ್ಣು ತಪ್ಪಿನಿಂದ ಬಿಟ್ಟಿರಬಹುದು. ಸರ್ವೆ ನಂ. 307 ಹಾಗೂ 267 ಆಸ್ತಿಯ ಯಾವುದೇ ದಾಖಲೆಯನ್ನು ಹಾಜರು ಪಡೆಸಿರುವುದಿಲ್ಲ ಅಂದರೆ ಸರಿ ಅಲ್ಲ. ಪ್ರತಿವಾದಿಯರು ಏನು ತಕರಾರು ಹಾಕಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ. ದಾವಾ ಐಟಂ ನಂಬರ 9 ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿ ಅಂದರೆ ಸರಿ ಅಲ್ಲ. ಅದು ನಮ್ಮ ಕುಟುಂಬಕ್ಕೆ ಸೇರಿದ್ದು ಎಂದು ದಾಖಲೆಗಳನ್ನು ನೋಡಿರುತ್ತೇನೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡೆಸಲು ತೊಂದರೆ ಇಲ್ಲ. ಅದು ನಮ್ಮ ಕುಟುಂಬದ ಆಸ್ತಿ ಅಲ್ಲದಿರುವುದರಿಂದ ಉದ್ದೇಶಪೂರ್ವಕವಾಗಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡೆಸಿರುವುದಿಲ್ಲ. ದಾವಾ ಆಸ್ತಿಯ ಚೆಕಬಂದಿಯನ್ನು ನಾವು ಸರಿಯಾಗಿ ಕಾಣಿಸಿಲ್ಲ ಅಂದರೆ ಸರಿ ಅಲ್ಲ. ಮನೆಯ ಆಸ್ತಿಯ ಬಗ್ಗೆ ಯಾವುದೇ ದಾಖಲೆಗಳನ್ನು ಸರಿಯಾಗಿ ಹಾಜರು ಪಡೆಸಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಯರು ದಾವಾ ಆಸ್ತಿಯ ಉತ್ಪನ್ನವನ್ನು ತೆಗೆದುಕೊಂಡು ದುಂದುವೆಚ್ಚ ಮಾಡುತ್ತಾ ಇರುತ್ತಾರೆ. ದಾವಾ ಆಸ್ತಿಗಳಿಗೆ ಬೋರವೆಲ್ ವ್ಯವಸ್ಥೆ ಇರುತ್ತದೆ. ಈ ವಿಷಯವನ್ನು ದಾವೆಯಲ್ಲಿ ಹೇಳಿರುವುದಿಲ್ಲ. ದಾವಾ ಎಲ್ಲಾ ಆಸ್ತಿಗಳು ಕುಷ್ಕಿ ಜಮೀನುಗಳು ಎಂದರೆ ಸರಿ ಅಲ್ಲ. ದಾವಾ ಮನೆಯ ಆಸ್ತಿಗಳು ಸ್ವಾಧೀನ ಪಡೆಸಿಕೊಳ್ಳಲು ನೋಟಿಫಿಕೇಷನ್‌ಯಾಗಿದೆ ಎಂದರೆ ನಿಜ. ಈ ಬಗ್ಗೆ 1 ಮತ್ತು 2 ನೇ ಪ್ರತಿವಾದಿಗಳು ಉಚ್ಚ ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದಿರುತ್ತಾರೆ ಎಂದರೆ ನಿಜ. ಅವರು ಆಸ್ತಿಯನ್ನು ಉಳಿಸಲು ಹಣ ಖರ್ಚು ಮಾಡಿರುತ್ತಾರೆ ಹೊರೆತು ದುಂದು ವೆಚ್ಚ

ಮಾಡಿರುವುದಿಲ್ಲ ಎಂದರೆ ಸರಿ ಅಲ್ಲ. 2 ನೇ ಪ್ರತಿವಾದಿ ಮಗಳ ಮದುವೆಗೆ ಮತ್ತು ಜಮೀನಿನ ಅಭಿವೃದ್ಧಿಗೆ ಕೃಷಿ ಸಾಲ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

2) ವಾದಿಯರ ಮದುವೆ ಮಾಡುವಾಗ ಹೇರಳವಾಗಿ ಬಂಗಾರ ಮತ್ತು ಹಣ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಖಾಸಗಿ ವ್ಯಕ್ತಿಗಳಿಂದ ಸಾಲ ಮಾಡಿದ್ದರೂ ಅವುಗಳನ್ನು ತಿರುವಳಿ ಮಾಡಲು ಎರಡು ಆಸ್ತಿಗಳನ್ನು ಮಾರಾಟ ಮಾಡಿದರೂ ಎಂದರೆ ಸರಿಯಲ್ಲ. ಮಳೆ ಸರಿಯಾಗಿ ಬರದ ಕಾರಣ ಆಸ್ತಿಗಳಿಂದ ಹೆಚ್ಚು ಉತ್ಪನ್ನ ಇರುವುದಿಲ್ಲ ಎಂದರೆ ಸರಿಯಲ್ಲ. ಅವಶ್ಯಕ ಪಕ್ಷಗಾರರನ್ನು ಮಾಡದೇ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಸಲ್ಲಬೇಕಾದ ಭಾಗವನ್ನು ಹಣ ಮತ್ತು ಬಂಗಾರದ ರೂಪದಲ್ಲಿ ಕೊಟ್ಟಿದ್ದರೂ ಈಗ ಜಮೀನಿನ ಬೆಲೆ ಹೆಚ್ಚಾಗಿದ್ದರಿಂದ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ಮನೆ ಆಸ್ತಿ ಸ್ವಾಧೀನದ ವಿಚಾರವಾಗಿ ಹೆಚ್ಚು ಹಣ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅವರು ಯಾವುದೇ ದುಂದು ವೆಚ್ಚ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು 3 ಮತ್ತು 4 ನೇ ಪ್ರತಿವಾದಿ ಪರ ವಕೀಲರಿಂದಃ**

3 ಮತ್ತು 4 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

ಸಹಿ/-
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ಬ್ಯಾಡಗಿ.